"ಬಿದ್ದಪ್ಪ, ನಾವು ಹೋಗ್ತಾ ಇರೋದು ಬಾಳೆಕಾಡ್ ಎಸ್ಟೇಟಿಗೆ... ರುದ್ರಮುನಿಯನ್ನು ಗುಜರಾತಿಗೆ ಅಟ್ಟಿದ ಆರೋಪದ ಮೇಲೆ ಏಡುಕೊಂಡಲುವನ್ನು ಬಂಧಿಸಲು!! ಏಡುಕೊಂಡಲುವಿದು ಎಂತಹ ಪ್ರಳಯಾಂತಕ ಮೆದುಳು ನೋಡು! ನಿರ್ಗತಿಕ, ಭಿಕಾರಿಗಳನ್ನು ಕುಡಿಯಲು ಸಂಗಾತಿಯಾಗಿ ಆರಿಸಿಕೊಳ್ತಾನೆ. ನಂತ್ರ ಒಂದು ದಿನ ಅವರ ಕಿಡ್ನಿ ಅಪಹರಿಸ್ತಾನೆ!! ಆಮೇಲೆ, ಅವರನ್ನು ಹುಚ್ಚರನ್ನಾಗಿಸಿ, ಎಲ್ಲಿಯೋ ದೂರದ ಊರಿನಲ್ಲಿ ಬಿಟ್ಟು ಬಿಡುತ್ತಾನೆ. ನಿರ್ಗತಿಕರು ನಾಪತ್ತೆಯಾದರೆ ಕೇಳುವವರಾರು? ಇದು ಅವನ ಕಾರ್ಯತಂತ್ರ. ಕಿಡ್ನಿಯನ್ನು ಲಕ್ಷಾಂತರ ರೂಪಾಯಿಗಳಿಗೆ ಮಾರುತ್ತಾನೆ. ನೀನು ಆವತ್ತು ಪತ್ರಿಕೆಗಳಲ್ಲಿ ಓದಿದ್ದಿಯಲ್ಲ. ಕೊಡಗಿನಲ್ಲಿ ಕಿಡ್ನಿ ಮಾರಾಟ ಜಾಲ ಸಕ್ರಿಯವಾಗಿದೆ ಅಂತ. ಖಾಸಗಿ ಆಸ್ಪತ್ರೆಗಳು ಆತನ ಗ್ರಾಹಕರು. ಕಿಡ್ನಿ ಅಗತ್ಯವಿರುವಾಗ ಅವರು ಸೂಚನೆ ಕೊಡ್ತಾರೆ..."

"ಕಿಡ್ನಿ ಅಪಹರಿಸುವುದೇ! ಹೇಗೆ? ಎಲ್ಲಿ?"

"ಆತನ ಮನೆಯಲ್ಲಿಯೇ! ಆತನ ಸ್ಟಡಿ ರೂಮಿನಲ್ಲಿ. ಅಲ್ಲಿರೋ ಕಪಾಟು ನಕಲಿ... ಕಪಾಟಿನ ಕದ ತೆರೆದರೆ, ಒಳಗೆ ನೆಲಮಾಳಿಗೆಗೆ ಮೆಟ್ಟಿಲುಗಳಿವೆ. ಕಪಾಟಿನಲ್ಲಿದ್ದಿದ್ದು ಪುಸ್ತಕಗಳಂತೆ ಕಾಣುವ ರಟ್ಟಿನ ಪೆಟ್ಟಿಗೆಗಳು! ಸೂಕ್ಷ್ಮವಾಗಿ ನೋಡ್ದಾಗ ನನ್ನ ಗಮನಕ್ಕೆ ಬಂತು. ರುದ್ರಮುನಿ ಆವತ್ತು ಆ ಕೋಣೆಲಿ ಏಡುಕೊಂಡಲುವಿನ ಹೆಂಡ್ತಿ ನಿಗೂಢವಾಗಿ ನಾಪತ್ತೆಯಾದಳು ಅಂತ ಹೇಳಿದ್ದ ಅಲ್ವೇ? ಅದು ನನ್ನ ತಲೆ ಕೊರಿತಾ ಇತ್ತು. ಅಲ್ಲಿ ನೆಲಮಾಳಿಗೆ ಇರಲೇಬೇಕೆಂದು ತರ್ಕಿಸಿದ್ದೆ. ನೆಲಮಾಳಿಗೆಯಲ್ಲಿ ಸುಸಜ್ಜಿತ ಆಪರೇಶನ್ ಥಿಯೇಟರ್ ಇದೆ!! ನೆನಪಿದೆಯಾ? ಆದಿನ ನೀನು ಆ ಹಳೆ ಸಾಮಾನುಗಳಿದ್ದ ಕೋಣೆಯಲ್ಲಿದ್ದಾಗ ಫೋನು ಮಾಡಲು ಅಂತ ನಾನು ಹೋಗಿದ್ದು... ಆಗ ನಾನು ಮಾಡಿದ್ದು ನೆಲಮಾಳಿಗೆ ಪರೀಕ್ಷಿಸುವ ಕೆಲ್ಸ!"

"ಆದ್ರೆ ಕಿಡ್ನಿ ತೆಗೆಯೋಕೆ ವೈದ್ಯರು ಬೇಕಲ್ಲವೇ?"

"ಸೂಚನೆ ಕೊಟ್ಟೊಡನೆ ಸಂಬಂಧಿತ ಆಸ್ಪತ್ರೆಯ ವೈದ್ಯರು ಬರ್ತಾರೆ. ಇದನ್ನು ಖಾತ್ರಿಪಡಿಸಲು ನೇಟಿವ್ ಕ್ಲಬ್ಬಿನ ಸಿಸಿಟೀವಿ ನಮ್ಮ ನೆರವಿಗೆ ಬಂತು. ರುದ್ರಮುನಿ ಕಾಣೆಯಾಗುವ ಹಿಂದಿನ ದಿನ, ಅಂದ್ರೆ ಗುರುವಾರ, ರಾತ್ರಿ ಹನ್ನೆರಡರ ಹೊತ್ತಿಗೆ ಒಂದು ಕಾರು ಬಾಳೇಕಾಡ್ ಎಸ್ಟೇಟಿಗೆ ಹೋಗಿದ್ದು ದಾಖಲಾಗಿದೆ. ಆ ಕಾರು ಚಿನ್ಮಯ ಆಸ್ಪತ್ರೆಯ ವೈದ್ಯರೊಬ್ಬರದ್ದು. ಅವರು ಮೂತ್ರಪಿಂಡ ಸರ್ಜನ್! ಆ ಕಾರು ಬೆಳಗಿನ ಜಾವ ನಾಲ್ಕೂವರೆಗೆ ಅಲ್ಲಿಂದ ವಾಪಸಾಗಿದೆ!! ಆ ಕಾರಿನ ಚಕ್ರದ ಗುರುತುಗಳು ನಮಗಾವತ್ತು ಕಂಡ ಚಕ್ರಗಳ ಗುರುತಿಗೆ ತಾಳೆಯಾಗಿದೆ..."

"ಅಲ್ಲಿ ಸೈಕಲಿನ ಚಕ್ರದ ಗುರುತುಗಳಿದ್ದುವಲ್ಲ..."

"ಅವು ಸ್ಟ್ರೆಚರಿನದ್ದು ಬಿದ್ದಪ್ಪ. ರುದ್ರಮುನಿಯನ್ನು ಅದರಲ್ಲಿ ತಂದು ಕಾರಿಗೆ ವರ್ಗಾಯಿಸಿದ್ದಾರೆ! ಆ ಗುರುತು ಕಂಡಾಗಲೇ ನನಗೆ ಈ ಸಂಚಿನ ಸುಳಿವು ಸಿಕ್ಕಿತ್ತು!! ಆತನನ್ನು ಹೊತ್ತುಕೊಂಡ ಕಾರು ಶನಿವಾರ ರಾತ್ರಿ ಎರಡರ ಹೊತ್ತಿಗೆ ಅಲ್ಲಿಂದ ಬಂದಿದ್ದು ಸಿಸಿಟೀವಿಯಲ್ಲಿ ದಾಖಲಾಗಿದೆ! ಅದು ಏಡುಕೊಂಡಲುವಿನ ಕಾರು. ಅದನ್ನು ಚಲಾಯಿಸ್ತಾ ಇದ್ದವನು ನಲ್ಲತಂಬಿ. ಆತ ಗುಜರಾತಿನಲ್ಲಿ ರುದ್ರಮುನಿಯನ್ನು ಬಿಟ್ಟು ಬಂದಿದ್ದಾನೆ. ರುದ್ರಮುನಿಯನ್ನು ತಲಾಷು ಮಾಡಲಿಕ್ಕೆ ಇಷ್ಟು ದಿನಗಳಾದವು. ಗುಜರಾತ್‌ನ ಟಾಲ್ ಗೇಟ್ ಒಂದರಲ್ಲಿ ದಾಖಲಾದ ಆ ಕಾರಿನ ಸಂಖ್ಯೆಯ ಆಧಾರದ ಮೇಲೆ ಆ ಪ್ರದೇಶದಲ್ಲಿ ಪೊಲೀಸರು ಹುಡುಕಾಡಿ, ಎಲ್ಲೋ ಅನಾಥವಾಗಿ ಬಿದ್ದಿದ್ದ ರುದ್ರಮುನಿಯನ್ನು ಪತ್ತೆ ಮಾಡಿದ್ರು. ಅಲ್ಲಿಗೆ ನಮ್ಮ ತನಿಖೆ ಒಂದು ತಾರ್ಕಿಕ ಅಂತ್ಯ ಕಂಡಿತು. ಇನ್ನು ಬಾಕಿ ಉಳಿದಿದ್ದು ಏಡುಕೊಂಡಲು